**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ & ಎಮ.ಎ.ಸಿ.ಟಿ XV, ಜೇವರ್ಗಿ**

**<u>MVC No.1312/2021</u>**

**RW2**

**ಸಾಕ್ಷಿಗೆ ದಿನಾಂಕ 10-09-2024 ರಂದು ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| ಸಾಕ್ಷಿಯ ಹೆಸರು | ಃ | ಸಂಗಮೇಶ ಅಂಗಡಿ |
| ತಂದೆಯ ಹೆಸರು | ಃ | ಗುರಪ್ಪ |
| ವಯಸ್ಸು | ಃ | 32 ವರ್ಷ |
| ಉದ್ಯೋಗ | ಃ | PSI , ಮಳಖೇಡ ಪೊಲೀಸ್ ಠಾಣೆ |
| ವಾಸಸ್ಥಳ | ಃ | ಮಳಖೇಡ |

**<u>2ನೇ ಎದುರುದಾರರು ಹಾಗೂ ಅವರ ಪರ ವಕೀಲರು ಗೈರುಹಾಜರಾಗಿದ್ದು ಅವರ ಅನುಪಸ್ಥಿತಿಯಲ್ಲಿ ಸಾಕ್ಷ್ಯ ನುಡಿಯಬಲ್ಲೆ ಎಂದು ಹೇಳಿದ ಕಾರಣ ಸಾಕ್ಷಿಯ ಹೇಳಿಕೆಯನ್ನು ಈ ಕೆಳಕಂಡಂತೆ ತೆಗೆದುಕೊಳ್ಳಲಾಯಿತು.</u>**

ನಾನು 06-03-2020 ರಿಂದ 30-01-2023ವರೆಗೆ ಜೇವರ್ಗಿ ಪೋಲಿಸ ಠಾಣೆಯಲ್ಲಿ ಆರಕ್ಷಕ ಉಪ-ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 07-05-2021ರಂದು ಸಾಯಂಕಾಲ 05-30 ಗಂಟೆ ಸುಮಾರಿಗೆ ಫಿರ್ಯಾದುದಾರರಾದ ಸೂಗಯ್ಯ ತಂದೆ ನಾಗಯ್ಯ ಹಿರೇಮಠ ಎನ್ನುವವರು ಠ-ಣೆಗೆ ಹಾಜರಾಗಿ ಲಿಖಿತ ದೂರು ನೀಡಿದ ಮೇರೆಗೆ ಪೊಲೀಸ್ ಠಾಣಾ ಗು.ನಂ.96/2021ರಂತೆ ಭಾರತೀಯ ದಂಡ ಸಂಹಿತೆ ಕಲಂ 279, 338ರಂತೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಪೊಲೀಸ್ ಸಿಬ್ಬಂದಿ ಬಸಣ್ಣಗೌಡರವರ ಮೂಲಕ ನ್ಯಾಯಾಲಯಕ್ಕೆ ನಿವೇಧಿಕೊಂಡಿರುತ್ತೇನೆ.

ದಿನಾಂಕ 08-05-2021ರಂದು ಅಪಘಾತ ಸ್ಥಳದ ಪಂಚನಾಮೆಯನ್ನು ಪಂಚರಾದ ಉಮೇಶ ಮತ್ತು ರವಿರವರ ಸಮಕ್ಷಮ ಗುನ್ನ ಜಾಗದ ಪಂಚನಾಮೆ ಜರುಗಿಸಿರುತ್ತೇನೆ. ಆ ನಂತರ ಅಪಘಾತಪಡಿಸಿದ ಲಾರಿ ನಂ.ಎಂ.ಪಿ.06 ಹೆಚ್.ಸಿ-1382ರ ಲಾರಿಯನ್ನು ಜಪ್ತಿಪಡಿಸಿಕೊಂಡಿರುತ್ತೇನೆ. ದಿನಾಂಕ 15-05-2021ರಂದು ಪ್ರಕರಣದಲ್ಲಿ ಭಾಗಿಯಾದ ಲಾರಿ

ನಂ.ಎಂ.ಪಿ.06 ಹೆಚ್.ಸಿ-1382ರ IMV ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕ 29-06-2024ರಂದು ಗಾಯಾಳು ಸೂಗಯ್ಯರವರ ಗಾಯದ ಪ್ರಮಾಣ ಪತ್ರವನ್ನು ಡಾಃಸಂತೋಷ ಹೆಚ್.ಜಿ ರವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕ 30-06-2021ರಂದು ಪ್ರರಕಣದಲ್ಲಿ ತನಿಖೆ ಪೂರ್ಣಗೊಳಿಸಿ ಲಭ್ಯವಿದ್ದ ಸಾಕ್ಷ್ಯಗಳ ಆಧಾರದ ಮೇಲೆ ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡುಬಂದ ಕಾರಣ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅಪಘಾತವು ದಿನಾಂಕ 28-04-2021ರಂದು ಆಗಿದ್ದು ದೂರುದಾರರು ದೂರನ್ನು ದಿನಾಂಕ 07-05-2021ರಂದು ನೀಡಿದ್ದು ದೂರು ನೀಡಲು ವಿಳಂಬವನ್ನು ದೂರುದಾರರು ದೂರಿನಲ್ಲಿ ನಮೂದು ಮಾಡಿರುತ್ತಾರೆ. ದೂರುದಾರರು ಉಪಚಾರ ಪಡೆದುಕೊಂಡು ಗುಣಮುಖವಾದ ನಂತರ ತಡಮಾಡಿ ಇಂದು ಠಾಣೆಗೆ ಬಂದು ದೂರನ್ನು ಸಲ್ಲಿಸಿರುವುದಾಗಿ ದೂರಿನಲ್ಲಿ ನಮೂದಿಸಿರುತ್ತಾರೆ.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಸ್.ಎ.ಕೆ. ವಕೀಲರು ಏನೂ ಇಲ್ಲ ಎಂದು ತಿಳಿಸಿರುತ್ತಾರೆ.**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರಗಿ